MR. SPEAKER: Please verify.

ಮುಳುಗಡೆಯಾಗುವ ಬಾಗಲಕೋಟೆ ಭಾಗಗಳನ್ನು ಭಾದಿತ ಪ್ರದೇಶವೆಂದು ಘೋಷಿಸುವುದು.

55(154) ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸಕ್ತ ವರ್ಷದ ಮುಂಗಡ ಪತ್ರದಲ್ಲಿ ಹೇಳಿರುವಂತೆ 525 ಮೀ. ಎಫ್ ಆರ್ ಎಲ್ ವರೆಗೆ ನೀರು ಸಂಗ್ರಹಣೆಯಾದಾಗ ಮುಳುಗಡೆಯಾಗುವ ಬಾಗಲ ಕೋಟೆಯ ಭಾಗಗಳನ್ನು ಬಾಧಿತ ಪ್ರದೇಶ ಎಂದು ಪರಿಗಣಿಸಿ ಅದನ್ನು ಹಂತ ಹಂತವಾಗಿ ಸ್ವಾಧೀನ ಪಡಿಸಿಕೊಳ್ಳಲಾಗುವುದು ಎಂಬ ಅಂಶಗಳು ಸರ್ಕಾರದ ಗಮನದಲ್ಲಿದೆಯೇ?

ಆ) ಹಾಗಿದ್ದಲ್ಲಿ ಭೂ ಸ್ವಾಧೀನಕ್ಕಾಗಿ ಪ್ರಸಕ್ತ ವರ್ಷ ಹಣವನ್ನೇನಾದರೂ ತೆಗೆದಿರಿಸಲಾಗಿದ್ದಲ್ಲಿ ಎಷ್ಟು ಹಣವನ್ನು ನಿಗಧಿಪಡಿಸಲಾಗಿದೆ ಹಾಗೂ ಯಾವ ಉದ್ದೇಶಗಳಿಗಾಗಿ ಮೀಸಲಿಡಲಾಗಿದೆ ತಿಳಿಸುವುದು.

ಇ) ಹಂತ ಹಂತವಾಗಿ ಸ್ವಾಧೀನಪಡಿಸಿಕೊಳ್ಳುವ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಸಮಯದ ಗಡುವನ್ನೇನಾದರೂ ಹಾಕಿಕೊಳ್ಳಲಾಗಿದೆಯೇ, ಹಾಗಿದ್ದರೆ ಸಮಯಾವಕಾಶವೆಷ್ಟು:

ಈ) ಈ ಕುರಿತಂತೆ ಸರ್ಕಾರದಿಂದ ಹಮ್ಮಿಕೊಂಡ ವಿಸ್ತೃತ ಕ್ರಿಯಾ ಯೋಜನೆಗಳ ವಿವರ ನೀಡುವುದು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಸರಕಾರ 2002-03 ಮುಂಗಡ ಪತ್ರದ ಕಂಡಿಕೆ 148 ರಲ್ಲಿ ತನ್ನ ನಿರ್ಧಾರ ಪ್ರಕಟಿಸಿದೆ. ಅದರ ಪ್ರಕಾರ 525 ಮೀ.ವರೆಗೆ ನೀರು ಸಂಗ್ರಹಣೆಯಾದಾಗ ಮುಳುಗಡೆಯಾಗುವ ಬಾಗಲಕೋಟೆಯ ಭಾಗಗಳನ್ನು ಭಾದಿತ ಪ್ರದೇಶವೆದು ಪರಿಗಣಿಸಿ ಹಂತ ಹಂತವಾಗಿ ಸ್ವಾಧೀನಪಡಿಸಿಕೊಳ್ಳಲಾಗುವುದು.

ಆ) ಹಿಪ್ಪರಿನ ಮಟ್ಟ 521.00 ಮೀ.ವರೆಗೆ ಈಗಾಗಲೆ ಸ್ವಾಧೀನ ಪ್ರಕ್ರಿಯೆ ಮುಗಿದಿದೆ. 521.00 ಮೀ.ನಿಂದ 525.00 ಮೀ.ವರೆಗಿನ ಸ್ವಾಧೀನ ಪ್ರಕ್ರಿಯೆಯನ್ನು ಮುಂದೆ ಹಂತಹಂತವಾಗಿ ತೆಗೆದುಕೊಳ್ಳಲಾಗುವುದು ಹಾಗೂ ಅದಕ್ಕೆ ಹಣವನ್ನು ತೆಗೆದಿರಿಸಲಾಗುವುದು.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಪಿ.ಹೆಚ್. ಪೂಜಾರ್: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಬಹಳ ಸೊಗಸಾಗಿ ಕೊಟ್ಟಿದ್ದಾರೆ. ಮಾನ್ಯ ಹೆಚ್.ಕೆ. ಪಾಟೀಲರಂಥ ಸಚಿವರಿಂದ ನಾನು ಈ ರೀತಿಯ ಉತ್ತರವನ್ನು ನಿರೀಕ್ಷೆ ಮಾಡಿರಲಿಲ್ಲ. ಪ್ರಾಥಮಿಕ ಶಾಲೆಯ ಹಂತದಲ್ಲಿ ನಾವು ನಾಲ್ಕನೇ ತರಗತಿಯಲ್ಲಿ ಕಲಿಯುತ್ತಿದ್ದಾಗ ಒಂದು ವೈಜ್ಞಾನಿಕವಾದಂಥ ಪ್ರಶ್ನೆ ಇತ್ತು. ರಾತ್ರಿಯ ಹೊತ್ತು

ಗಿಡಗಳ ಕೆಳಗೆ ಏಕೆ ಮಲಗಬಾರದು ಎನ್ನುವ ಬಗ್ಗೆ ವೈಜ್ಞಾನಿಕವಾದಂಥ ಪಾಠವಿತ್ತು. ರಾತ್ರಿಯ ಹೊತ್ತು ಸಿಓ-2 ಬಿಡುಗಡೆಯಾಗುತ್ತದೆ. ಆ ಸಿಓ-2 ಮುಷ್ಯನಿಗೆ ಒಳ್ಳೆಯದಲ್ಲ, ಮನುಷ್ಯನಿಗೆ ಪ್ರಾಣವಾಯು ಬೇಕು ಎನ್ನುವ ಕಾರಣದಿದ ಮಲಗಬಾರದು ಎಂದು ಇತ್ತು. ಈ ಬಗ್ಗೆ ಪ್ರಶ್ನೆ ಬಂದರೆ, ಅದಕ್ಕೆ ನಾವು ಏನೆಂದು ಉತ್ತರ ಬರೆಯುತ್ತಿದ್ದೆವು ಎಂದರೆ ರಾತ್ರಿಯ ಹೊತ್ತು ಗಿಡದ ಕೆಳಗೆ ಮಲಗಬಾರದು ಏಕೆಂದರೆ ರಾತ್ರಿಯ ಹೊತ್ತು ಗಿಡದ ಕೆಳಗೆ ಮಲಗಬಾರದು, ಆದ್ದರಿಂದ ರಾತ್ರಿಯ ಹೊತ್ತು ಗಿಡದ ಕೆಳಗೆ ಮಲಗಬಾರದು ಎಂದು ಬರೆಯುತ್ತಿದ್ದೆವು. ಈ ರೀತಿಯ ಅದನ್ನೇ ಟ್ವಿಸ್ಟ್ ಮಾಡಿ ಮತ್ತೆ ಮತ್ತೆ ಅದನ್ನೇ ಬರೆದು, ಕೊನೆಗೆ ಉತ್ತರ ಸಿಗಲಿಲ್ಲ ಎಂದು ಹೇಳಿಬಿಟ್ಟರೆ ಮುಗಿದು ಹೋಯಿತು. ಆ ರೀತಿ, ಈ ಉತ್ತರ ಇದೆ. ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ಕೇಳುತ್ತಿದ್ದೇನೆ, ಬಾಗಲಕೋಟೆ ಮುಳುಗಡೆ ಕುರಿತಂತೆ ಅಲ್ಲಿಯ ಲಕ್ಷಾಂತರ ಜನ ನಾಗರೀಕರು ಸುಮಾರು ಒಂದೂವರೆ-ಎರಡು ತಿಂಗಳುಗಳಿಂದ ತಮ್ಮ ಕೆಲಸ ಕಾರ್ಯಗಳನ್ನು ಬಿಟ್ಟು ಧರಣಿ ಕಾರ್ಯಕ್ರಮವನ್ನು ಹಾಕಿಕೊಂಡಿದ್ದರು. ಆ ಸಂದರ್ಭದಲ್ಲಿ ಅವರಿಗೆ ಆರೋಗ್ಯದ ದೃಷ್ಟಿಯಿಂದ ತೊಂದರೆಯಾಗುತ್ತಿದೆ. ನೀರು ನಿಂತಂಥ ಸಂದರ್ಭಗಳಲ್ಲಿ ಮನೆಗಳಲ್ಲಿ ವಾಸ ಮಾಡಲು, ಬದುಕಲು ಆಗುವುದಿಲ್ಲವೆನ್ನುವಂಥ ಚಿತ್ರಣವನ್ನು ತಾವೆಲ್ಲಾ ಕಲ್ಪನೆ ಮಾಡಿಕೊಂಡಿದ್ದೀರಿ. ಹೆಚ್ಚಿನ ಮನೆಗಳಿಗೆ ಇನ್ನೂ ಪರಿಹಾರಧನ ಕೊಡಲಾರದಂಥ ಸ್ಥಿತಿಯನ್ನೂ ತಾವೆಲ್ಲಾ ನೋಡಿದ್ದಿರಿ. ಮುಖ್ಯಮಂತ್ರಿಗಳ ಬಳಿ ನಿಯೋಗ ಬಂದಾಗ ತಾವೆಲ್ಲಾ ಕುಳಿತು ಚರ್ಚೆ ಮಾಡಿ, ತೀರ್ಮಾನ ಮಾಡಿದ್ದೀರಿ. ನಾವು ಇದು ಸರಿಯಲ್ಲ, ಇದಕ್ಕೆ ಒಳ್ಳೆಯ ತೀರ್ಮಾನವನ್ನು ಮಾಡುತ್ತೇವೆ. ಬಾಗಲಕೋಟೆಯ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡುತ್ತೇವೆ. ಮತ್ತೊಬ್ಬರ ಒಳಿತಿಗಾಗಿ ತಮ್ಮ ಅಸ್ತಿತ್ವವನ್ನೆಲ್ಲಾ, ಉದ್ಯೋಗ, ವ್ಯಾಪಾರ ಇತ್ಯಾದಿ ಗಳನ್ನು ಕಳೆದುಕೊಂಡಂಥ ಜನರಿಗೆ ನಾವು ನ್ಯಾಯ ಒದಗಿಸಿಕೊಡುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟಿದ್ದಿರಿ.

ಅಧ್ಯಕ್ಷರು: ತಾವು ಭಾಷಣ ಮಾಡಬೇಡಿ, ದಯವಿಟ್ಟು ಉಪಪ್ರಶ್ನೆಯನ್ನು ಕೇಳಿ.

ಶ್ರೀ ಪಿ.ಹೆಚ್. ಪೂಜಾರ್: 525 ಮೀ.ವರೆಗೆ ನೀರು ಸಂಗ್ರಹಣೆಯಾದಾಗ ಮುಳುಗಡೆಯಾಗುವ ಪ್ರದೇಶದವರಿಗೆ ಪುನರ್ ವಸತಿ ಮಾಡಲೇಬೇಕು, ಇಡೀ ಬಾಗಲಕೋಟೆ ನಗರವನ್ನು ಸ್ಥಳಾಂತರ ಮಾಡುವ ದಿಸೆಯಲ್ಲಿ ಒಂದು ಒಳ್ಳೆಯ ಕಾರ್ಯ ಕ್ರಮವನ್ನು ಹಾಕಿಕೊಳ್ಳಬೇಕು. ಅದನ್ನು ಈಗಿನಿಂದಲೇ ಹಾಕಿಕೊಳ್ಳುತ್ತೇವೆ ಎನ್ನುವ ಭರವಸೆಯನ್ನು ಸಹ ತಾವು ಹಿಂದೆ ಕೊಟ್ಟಿದ್ದಿರಿ. ಅದನ್ನು ನಾವು ಸ್ವಾಗತ ಮಾಡಿದ್ದೆವು. 525 ಮೀ.ವರೆಗೆ ನೀವು ಸಂಗ್ರಹಣೆಯಾದಾಗ ಮುಳುಗಡೆ ಯಾಗುವ ಪ್ರದೇಶವನ್ನು ಭಾದಿತ ಪ್ರದೇಶವೆಂದು ಗುರುತಿಸಿದ್ದೇವೆ ಎನ್ನುವುದನ್ನು ಬಜೆಟ್‌ನಲ್ಲಿ ತಾವು ಹೇಳಿದ್ದಿರಿ. ಹಂತಹಂತವಾಗಿ ಇದನ್ನು ಸ್ವಾಧೀನ ಮಾಡಿಕೊಳ್ಳುತ್ತೇವೆ ಎನ್ನುವುದನ್ನೂ ಹೇಳಿದ್ದರು. ಬಜೆಟ್‌ನಲ್ಲಿ ಹೇಳಿರುವಂಥಾದ್ದಕ್ಕೆ ಸರ್ಕಾರಕ್ಕೆ ಬದ್ಧತೆ ಇರಬೇಕೋ ಬೇಡವೋ ಎನ್ನುವಂಥಾದ್ದನ್ನು ನಾವು ಇವತ್ತು ಪ್ರಶ್ನೆ ಮಾಡಬೇಕಾಗಿದೆ.

ಅಧ್ಯಕ್ಷರು: ಹಾಗೆ ಪ್ರಶ್ನೆಯನ್ನು ಕೇಳಿ. ಅದು ಬಿಟ್ಟು ನೀವು ಅದರ ಬಗ್ಗೆ ವ್ಯಾಖ್ಯಾನ ಮಾಡಿಕೊಂಡು ಹೋದರೆ ಹೇಗೆ?

ಶ್ರೀ ಪಿ.ಹೆಚ್. ಪೂಜಾರ್: ಆದರೆ ಈ ವರ್ಷದ ಬಜೆಟ್‌ನಲ್ಲಿ ಒಂದು ಪೈಸೆಯನ್ನೂ ಕೂಡ ಇದಕ್ಕಾಗಿ ತೆಗೆದಿಟ್ಟಿಲ್ಲ ಮತ್ತು ಕಾಲಮಿತಿಯನ್ನೂ ಕೂಡ ಹೇಳಿಲ್ಲ. ನಾವು ಮಾಡುತ್ತೇವೆ,

ನೋಡುತ್ತೇವೆ, ಹೇಳುತ್ತೇವೆ ಎಂದಷ್ಟೇ ಹೇಳಿದ್ದಾರೆ. ಹೀಗಿರುವಾಗ ಸರ್ಕಾರ ಈ ರೀತಿ ಉತ್ತರ ಕೊಟ್ಟರೆ ಹೇಗೆ? ಸಚಿವರ ಉತ್ತರದಿಂದ ನಮಗೆ ಸಮಾಧಾನವಾಗಿಲ್ಲ, ಈ ಬಗ್ಗೆ ಸರ್ಕಾರ ಸ್ಪಷ್ಟೀಕರಣ ನೀಡಬೇಕು. ಕನಿಷ್ಟಪಕ್ಷ, ಐದು ವರ್ಷಗಳಲ್ಲಿ ಮಾಡುತ್ತೇವೆ, ಮುಂದಿನ ವರ್ಷದ ಬಜೆಟ್‌ನಲ್ಲಿ ಇದಕ್ಕಾಗಿ ಒಂದು ನೂರು ಕೋಟಿ ರೂಪಾಯಿಗಳನ್ನು ತೆಗೆದಿಡುತ್ತೇವೆ ಮತ್ತು ಅದಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡು ಮುಂದಿನ ಐದು ವರ್ಷಗಳಲ್ಲಿ ಮುಗಿಸುತ್ತೇವೆ ಎನ್ನುವ ಭರವಸೆಯನ್ನು ಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಹೆಚ್. ಕೆ. ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ಸನ್ಮಿತ್ರರಾದ ಪೂಜಾರ್‌ರವರು ಬೇರೆ ಏನನ್ನಾದರೂ ಲಕ್ಷ್ಯದಲ್ಲಿಟ್ಟುಕೊಂಡು ಭಾಷಣ ಮಾಡುತ್ತಿದ್ದರೆ ಅದಕ್ಕೆ ನನ್ನದೇನೂ ತಕರಾರಿಲ್ಲ ಕೊಟ್ಟಿರತಕ್ಕಂಥ ಉತ್ತರ ಸೊಗಸಾಗಿದೆ ಎಂದು ಹೇಳಿದರು. ಅಂದರೆ ವಕೀಲರು ಉತ್ತರವನ್ನು ಬಹಳ ಗಂಭೀರವಾಗಿ ಓದಿದ್ದಾರೆ ಎಂದು ನಾನು ತಿಳಿದುಕೊಂಡೆ. ತಾವು ಕೇಳಿರತಕ್ಕಂಥ ಪ್ರಶ್ನೆಗೆ, ನೇರವಾಗಿ ಸರ್ಕಾರದ ನಿಲುವಿನ ಹಿನ್ನೆಲೆಯಲ್ಲಿ, ಈಗಾಗಲೇ ನಾವು ಮುಂಗಡ ಪತ್ರದಲ್ಲಿ ಮಾಡಿರುವ ಘೋಷಣೆಯ ಹಿನ್ನೆಲೆಯಲ್ಲಿ ಉತ್ತರವನ್ನು ಒದಗಿಸಲಾಗಿದೆ. ಬಜೆಟ್‌ನಲ್ಲಿ ಇದಕ್ಕೆ ಒಂದು ನೂರು ಕೋಟಿ ಅಥವಾ ಎರಡು ನೂರು ಕೋಟಿ ರೂಪಾಯಿಗಳನ್ನಾದರೂ ತೆಗೆದಿಡಬೇಕಾಗಿತ್ತು ಎಂದು ತಾವು ಹೇಳುತ್ತಿದ್ದೀರಿ. ರೈತರಿಗೆ ನೀವು ಕನ್ವಿನ್ಸ್ ಮಾಡಬೇಕಾಗುತ್ತದೆ, ನಾನೂ ಕನ್ವಿನ್ಸ್ ಮಾಡಬೇಕಾಗುತ್ತದೆ. 525 ಮೀ.ವರೆಗೆ ಎತ್ತರ ಮಾಡುವ ಕಾರ್ಯಕ್ರಮವನ್ನು (ಬಿ)-ಸ್ಕೀಮಿಗೆ ಅನುಕೂಲವಾಗುವ ದೃಷ್ಟಿಯಿಂದ ಮಾಡಬೇಕಾಗುತ್ತದೆ. ಹೆಚ್ಚುವರಿ ನೀರನ್ನು ಸಂಗ್ರಹಣೆ ಮಾಡಲು ನಾವು ಅದನ್ನು ಮಾಡಲೇಬೇಕಾಗುತ್ತದೆ. ಅದು ಅನಿವಾರ್ಯ ಮತ್ತು ಅವಶ್ಯಕವೂ ಹೌದು. ಆಂಧ್ರ ಪ್ರದೇಶದವರು ಪರ್ಮನೆಂಟ್ ಇನ್ ಫ್ರಾಸ್ಟ್ರಕ್ಚರ್ ಅನ್ನು ಕೈಗೆತ್ತಿಕೊಳ್ಳಬಾರದು, (ಬಿ)-ಸ್ಕೀಮಿನಲ್ಲಿ ಯಾವುದೇ ಶಾಶ್ವತವಾದಂಥ ಕಾರ್ಯಕ್ರಮವನ್ನು ಮಾಡಬಾರದು ಎಂದು ನಾವು ಸುಪ್ರೀಂ ಕೋರ್ಟಿಗೆ ಹೋದಾಗ, ನಾವು ಮುಂದಿನ ಕಾರ್ಯಕ್ರಮಕ್ಕಾಗಿ ಬಜೆಟ್‌ನಲ್ಲಿ ಹಣ ಒದಗಿಸಬೇಕಾಯಿತು. 521 ಮೀ. ಹಂತದವರೆಗೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದೇವೆ. ಅದಕ್ಕೆ ನಾವು ಪರಿಹಾರ ಕಾರ್ಯಕ್ರಮವನ್ನು ರೂಪಿಸಿಕೊಂಡೆವು. ಮತ್ತು ಇದಕ್ಕಾಗಿ ಒಂದಷ್ಟು ಹಣ ತೆಗೆದಿಟ್ಟಿದ್ದೇವೆ ಎಂದು ಹೇಳುತ್ತೇವೆ. ತಾಂತ್ರಿಕವಾಗಿ, ಕಾನೂನಾತ್ಮಕವಾಗಿ ಇರತಕ್ಕಂಥ ಸೂಕ್ಷ್ಮ ವಿಚಾರಗಳನ್ನು ತಾವೂ ಸಹ ಒಬ್ಬ ವಕೀಲರಾಗಿ ಅವುಗಳನ್ನು ಗಮನಿಸುತ್ತೀರಿ ಎಂದು ನಾನು ಭಾವಿಸುತ್ತೇನೆ. ತಾವು ಕೇಳಿರುವ ಪ್ರಶ್ನೆ ಏನೆಂದರೆ, 'ಪ್ರಸಕ್ತ ವರ್ಷದ ಮುಂಗಡ ಪತ್ರದಲ್ಲಿ ಹೇಳಿರುವಂತೆ 525 ಮೀ. ಎಫ್.ಆರ್.ಎಲ್-ವರೆಗೆ ನೀರು ಸಂಗ್ರಹಣೆಯಾದಾಗ ಮುಳುಗಡೆಯಾಗುವ ಬಾಗಲಕೋಟೆಯ ಭಾಗಗಳನ್ನು ಭಾದಿತ ಪ್ರದೇಶ ಎಂದು ಪರಿಗಣಿಸಿ ಅದನ್ನು ಹಂತಹಂತವಾಗಿ ಸ್ವಾಧೀನಪಡಿಸಿಕೊಳ್ಳಲಾಗುವುದು ಎಂಬ ಅಂಶಗಳು ಸರ್ಕಾರದ ಗಮನದಲ್ಲಿದೆಯೇ?' ಎಂದು ಕೇಳಿದ್ದೀರಿ. ಅದಕ್ಕೆ ನಾವು 'ಸರಕಾರ 2002-03ರ ಮುಂಗಡ ಪತ್ರದ ಕಂಡಿಕೆ 148 ರಲ್ಲಿ ತನ್ನ ನಿರ್ಧಾರವನ್ನು ಸರ್ಕಾರ ಪ್ರಕಟಿಸಿದೆ. ಅದರ ಪ್ರಕಾರ 525 ಮೀ.ವರೆಗೆ ನೀರು ಸಂಗ್ರಹಣೆಯಾದಾಗ ಮುಳುಗಡೆಯಾಗುವ ಬಾಗಲಕೋಟೆಯ ಭಾಗಗಳನ್ನು ಭಾದ್ಯಿತ ಪ್ರದೇಶವೆಂದು ಪರಿಗಣಿಸಿ ಹಂತಹಂತವಾಗಿ ಸ್ವಾಧೀನಪಡಿಸಿಕೊಳ್ಳಲಾಗುವುದು ಎಂದು ಉತ್ತರ ಕೊಟ್ಟಿದ್ದೇವೆ. ಇದರಲ್ಲಿ ನೀವು ಏನು ಅ್ಯಂಬಿಗ್ವಿಟಿಯನ್ನು ನೋಡಿದಿರಿ? ಗಿಡದ ಬುಡದಲ್ಲಿ ಮಲಗಲು ಏಕೆ ಹೋದಿರಿ?

ಶ್ರೀ ಪಿ.ಹೆಚ್. ಪೂಜಾರ್: 525 ಮೀ. ವರೆಗೆ ನೀರು ಸಂಗ್ರಹಣೆಯಾದಾಗ, ಯಾವುದೇ ಸರ್ಕಾರವಾದರೂ ಸ್ವಾಧೀನ ಮಾಡಿಕೊಳ್ಳಬೇಕು. ಆದರಲ್ಲಿ ನೀವು ಹೇಳುವಂಥ ವಿಶೇಷತೆ ಏನಿದೆ? ಅದನ್ನು ಈಗ ಹೇಳುವಂಥ ಅವಶ್ಯಕತೆ ಏನಿತ್ತು?

ಶ್ರೀ ಹೆಚ್.ಕೆ. ಪಾಟೀಲ್: ನಾವು ಯಾವಾಗ ಪ್ರಕ್ರಿಯೆಯನ್ನು ಪ್ರಾರಂಭ ಮಾಡುತ್ತೇವೆ ಎನ್ನುವುದನ್ನೂ ಸಹ ತಮಗೆ ಉತ್ತರದಲ್ಲಿ ಕೊಟ್ಟಿದ್ದೇನೆ. ಟೈಬೌಂಡ್ ಪ್ರೋಗ್ರಾಂ ಮಾಡಿರುವಿರಾ? ಯಾವ ವರ್ಷ ಇದನ್ನು ಮುಗಿಸುತ್ತೀರಿ ಎನ್ನುವುದನ್ನು ತಾವು ಕೇಳಿದಿರಿ. ಈ ಸಂದರ್ಭದಲ್ಲಿ, ಹಲವಾರು ಕಾರಣಗಳಿಂದ, ರಾಜ್ಯದ ಹಿತದೃಷ್ಟಿಯಿಂದ ಆ ಟೈಂ ಬೌಂಡ್ ಪ್ರೋಗ್ರಾಂ ಅನ್ನು ಸ್ಪೆಲ್‌ಔಟ್ ಮಾಡಲು ಆಗುವುದಿಲ್ಲ. ಆದ್ದರಿಂದ ನಾವು ಟೈಂಬೌಂಡ್ ಪ್ರೋಗ್ರಾಂ ಮಾಡಿದ್ದೇವೆಯೇ ಅಥವಾ ಏನು ಮಾಡಿದ್ದೇವೆ ಎನ್ನುವ ಬಗ್ಗೆ ಈ ಸಂದರ್ಭದಲ್ಲಿ ಉತ್ತರವನ್ನು ಒದಗಿಸುವಂಥ ಪ್ರಶ್ನೆಯೇ ಇಲ್ಲ. ಆದ್ದರಿಂದ ನೀವು ಪ್ರಶ್ನೆ ಕೇಳಿರುವಂಥಾದ್ದಕ್ಕೆ ಉತ್ತರ ಕೊಟ್ಟಿದ್ದೇವೆ. ಈ ವಿಚಾರದಲ್ಲಿ ನಾವು ಮತ್ತು ನೀವು ಸಾಕಷ್ಟು ಚರ್ಚೆ ಮಾಡಿದ್ದೇವೆ. ಸನ್ಮಾನ್ಯ ಮುಖ್ಯಮಂತ್ರಿಗಳೂ ನಿಮ್ಮ ಜೊತೆ ಎರಡು ಗಂಟೆಗಳ ಕಾಲ ಕುಳಿತು ಚರ್ಚೆ ಮಾಡಿದ್ದಾರೆ. ಎಲ್ಲಾ ಸಂಸದರು ಮತ್ತು ಶಾಸಕರು ಒಂದು ನಿರ್ಣಯಕ್ಕೆ ಬಂದನಂತರ ಸರ್ಕಾರ ಅತ್ಯಂತ ಪ್ರಮುಖವಾಗಿರತಕ್ಕಂಥ ಈ ಘೋಷಣೆಯನ್ನು ಮಾಡಿದೆ. ಬಾಗಲಕೋಟೆ ನಗರದ ಜನರ ಆತಂಕ, ಕಾತರ ಎಲ್ಲವನ್ನೂ ಗಮನದಲ್ಲಿಟ್ಟಿಕೊಂಡು ಇದನ್ನು ಮಾಡಿದ್ದೇವೆ. ಅವರಿಗೆ ಯಾವುದೇ ರೀತಿಯಾದ ತೊಂದರೆಯಾಗದ ಹಾಗೆ ಸರ್ಕಾರ ನೋಡಿಕೊಳ್ಳುತ್ತದೆ.

11 ಪಿ.ಎಂ.

ಶ್ರೀ ಪಿ.ಹೆಚ್. ಪೂಜಾರ್: ಮಾನ್ಯ ಸಚಿವರು 525 ಮೀಟರ್‌ವರೆಗೆ ನೀರು ನಿಲ್ಲಿಸಿದಾಗ ಸ್ವಾಧೀನಪಡಿಸಿಕೊಳ್ಳಲಾಗುವುದು ಎಂದು ಹೇಳಿದ್ದಾರೆ. ಇದರಲ್ಲಿ ವಿಶೇಷತೆ ಏನು? 'ಬಿ' ಸ್ಕೀಂ ಬಂದಾಗ 525 ಮೀಟರ್ ಎತ್ತರಕ್ಕೆ ತೆಗೆದುಕೊಳ್ಳಲೇಬೇಕು, ಆಗ ಬಾಗಲಕೋಟೆ ನಗರದ ಮಟ್ಟಿಗೆ ಮಾತನಾಡುವ ಪರಿಸ್ಥಿತಿ ನನಗೆ ಬರುತ್ತಿರಲಿಲ್ಲ. ಜೊತೆಗೆ ನೂರಾರು ಹಳ್ಳಿಗಳಿಗೆ ನೀರು ನುಗ್ಗುತ್ತಿತ್ತು, ಆ ಹಳ್ಳಿಗಳನ್ನೂ ಸ್ವಾಧೀನಪಡಿಸಿ ಕೊಳ್ಳಬೇಕಾಗಿತ್ತು, ಅದಕ್ಕೆ ಪರಿಹಾರ ಧನ ಕೊಡಬೇಕಾಗಿತ್ತು, ಪುನರ್‌ವಸತಿ ಕಲ್ಪಿಸಬೇಕಾಗಿತ್ತು. ಇದು ಸರ್ಕಾರದ ಆದ್ಯ ಕರ್ತವ್ಯ. ಇದನ್ನು ಇವತ್ತು ನಾನು ಹೇಳುವ ಅವಶ್ಯಕತೆ ಇಲ್ಲ. ಸಚಿವರು, ಮುಖ್ಯಮಂತ್ರಿಗಳು ಎಲ್ಲರೂ ಸೇರಿ ತೀರ್ಮಾನಿಸಿದ ಸಂದರ್ಭದಲ್ಲಿ, ಬಾಗಲಕೋಟೆ ನಗರದ ಮಟ್ಟಿಗೆ ಮಾತ್ರ ಸೀಮಿತಗೊಂಡಂತೆ ಆ ಜನರಿಗೆ ವಸತಿಗೆ ತೊಂದರೆಯಾಗುತ್ತಿದೆ. ಮುಂದಿನ ಕಲ್ಪನೆ ಮಾಡಿಕೊಂಡು ಜಿಲ್ಲಾ ಕೇಂದ್ರ ಅಭಿವೃದ್ಧಿಯಾಗಬೇಕು.

ಶ್ರೀ ಹೆಚ್.ಕೆ. ಪಾಟೀಲ್: ಮಾನ್ಯ ಅಧ್ಯಕ್ಷರೆ, 519.6 ಮೀಟರ್‌ವರೆಗೆ ಮಾತ್ರ ನೀರು ನಿಲ್ಲಿಸಬೇಕೆಂದು ಸುಪ್ರೀಂ ಕೋರ್ಟಿನ ಆದೇಶವಿದೆ. ಅದು ತಮಗೆ ಗೊತ್ತಿದೆ. ಸುಪ್ರೀಂ ಕೋರ್ಟ್ ನಿರ್ದೇಶನವಿದ್ದ ಸಂದರ್ಭದಲ್ಲಿ ನಾವೇನಾದರೂ ಹೆಚ್ಚು ಮಾತನಾಡುವುದಕ್ಕಾಗುತ್ತದೆಯೇ? ತಾವು ಸೂಕ್ಷ್ಮ ತ್ರೈಯನ್ನು ಅರ್ಥಮಾಡಿಕೊಳ್ಳಬೇಕು. ಆ ಸೂಕ್ಷ್ಮ ತ್ರೈಯ ಹಿನ್ನೆಲೆಯೊಳಗೆ ಏನು ಘೋಷಣೆಗಳನ್ನು ಮಾಡುವುದಕ್ಕೆ ಸಾಧ್ಯವೋ, ಯಾವ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಸಾಧ್ಯವೋ, ಯಾವುದನ್ನು ತಮ್ಮ ಜೊತೆ ಹಂಚಿಕೆ ಮಾಡುವುದಕ್ಕೆ ಸಾಧ್ಯವೋ, ಅದನ್ನು ಅತ್ಯಂತ ಪ್ರಾಮಾಣಿಕತೆಯಿಂದ ಮಾಡಿದ್ದೇನೆ.

ಶ್ರೀ ಪಿ.ಹೆಚ್. ಪೂಜಾರ್: ಮಾನ್ಯ ಅಧ್ಯಕ್ಷರೆ.

ಅಧ್ಯಕ್ಷರು: ಇದು ಪ್ರಶ್ನೋತ್ತರ ವೇಳೆ. ಮೇಜರ್ ಇರಿಗೇಷನ್ ಡಿಮಾಂಡ್ಸ್ ಮೇಲೆ ಚರ್ಚೆ ನಡೆದಾಗ ತಾವು ಮಾತನಾಡಿ.

ಶ್ರೀ ಪಿ.ಹೆಚ್. ಪೂಜಾರ್: ಬಾಗಲಕೋಟೆ ಪುನರ್ ವಸತಿ ಸಲುವಾಗಿ ನಗರ ಅಥವಾ ಗ್ರಾಮದ ಸ್ಥಳಾಂತರ ಮಾಡಬೇಕೆಂದು ಸುಪ್ರೀಂ ಕೋರ್ಟ್ ಹೇಳಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಮಂತ್ರಿಗಳು ಹೇಳಿರುವ ಸೂಕ್ಷ್ಮ ತ್ರೆಯನ್ನು ಗಮನದಲ್ಲಿಟ್ಟುಕೊಂಡು ಈ ವಿಚಾರವನ್ನು ಇಲ್ಲಿಗೇ ನಿಲ್ಲಿಸುವುದು ಒಳ್ಳೆಯದು. ಕಾರಣವೇನೆಂದರೆ, the matter is pending before the Supreme Court. ಒಂದು ಆರ್ಡರ್ ಬಂದಿದೆ, ಇನ್ನೊಂದು ಆರ್ಡರ್‌ನ್ನು ನಾವು ಕಾಯುತ್ತಿದ್ದೇವೆ. ಈ ಮಧ್ಯೆ ನಾವು ಏನು ವ್ಯವಸ್ಥೆ ಮಾಡಿದ್ದೇವೆ, ಅದನ್ನು ಸಾರ್ವತ್ರಿಕವಾಗಿ ಹೇಳಿ ಬಿಟ್ಟರೆ...

ಶ್ರೀ ಜಗದೀಶ್ ಶೆಟ್ಟರ್: ಅದು ನಮಗೆ ಗೊತ್ತಿದೆ. ಅದರ ಬಗ್ಗೆ ನಮ್ಮ ತಕರಾರಿಲ್ಲ. ಬಡ್ಜೆಟ್ಟಿನ 148ನೇ ಪ್ಯಾರಾದಲ್ಲಿ ತಾವು, ಆಲಮಟ್ಟಿ ಅಣೆಕಟ್ಟೆಯ ಎತ್ತರವನ್ನು 524.256 ಮೀಟರ್‌ವರೆಗೆ ಏರಿಸುವ ನಿರ್ಧಾರಕ್ಕೆ ಸರ್ಕಾರ ಬದ್ಧವಾಗಿದೆ ಎಂಬುದನ್ನು ಒಪ್ಪಿದ್ದೀರಿ. ಮುಂದೆ ಈ ರೀತಿಯ ಯೋಜನೆ, ರಾಜ್ಯ ಸರ್ಕಾರದ ಮನಸ್ಸಿನ ಭಾವನೆ ಈ ರೀತಿ ಇದೆ ಎಂದು ಬಡ್ಜೆಟ್ಟಿನಲ್ಲಿ ಒಪ್ಪಿದ್ದೀರಿ. 2 ತಿಂಗಳಲ್ಲಿ ಸತ್ಯಾಗ್ರಹ ನಡೆದಿದ್ದು ತಮಗೆ ಗೊತ್ತಿದೆ. ಆ ಜನರಿಗೆ ಹೆದರಿಕೆ ಇದೆ. ಅದನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಕೆಲವು ವಿಚಾರಗಳಲ್ಲಿ ಸದನದಲ್ಲಿ ಬಹಿರಂಗವಾಗಿ ಚರ್ಚೆ ಮಾಡಲಿಕ್ಕಾಗುವುದಿಲ್ಲವೆಂದು ಹೇಳಿದ್ದೀರಿ, ಅದನ್ನು ನಾನು ಒಪ್ಪುತ್ತಿದ್ದೇನೆ, ಅದಕ್ಕೆ ನಮ್ಮ ತಕರಾರಿಲ್ಲ. ಆದರೆ, 525 ಮೀಟರ್ ಎತ್ತರಕ್ಕೆ ಏರಿಸುವ ಸಂದರ್ಭದಲ್ಲಿ ನಮ್ಮ ಪರಿಸ್ಥಿತಿ ಏನಾಗುವುದೋ ಎಂದು ಬಾಗಲಕೋಟೆ ನಗರದ ಜನತೆಗೆ ಹೆದರಿಕೆ ಇದೆ. ಅದನ್ನು ತೆಗೆದು ಹಾಕುವ ಸಲುವಾಗಿ ಸರ್ಕಾರ ಎಲ್ಲಾ ರೀತಿಯ ವ್ಯವಸ್ಥೆ ಮಾಡುತ್ತದೆಂಬ ಭರವಸೆ ಕೊಡುವುದಾಗಬೇಕು.

ಶ್ರೀ ಹೆಚ್.ಕೆ. ಪಾಟೀಲ್: ಮಾನ್ಯ ಪೂಜಾರ್ ಮತ್ತು ಜಗದೀಶ್ ಶೆಟ್ಟರ್‌ರವರಿಗೆ ಈ ಸಂದರ್ಭದಲ್ಲಿ ಒಂದು ವಿಷಯವನ್ನು ನೆನಪು ಮಾಡುವುದಕ್ಕೆ ಇಚ್ಚಿಸುತ್ತೇನೆ, ಬಾಗಲಕೋಟೆಯಲ್ಲಿ ನಡೆದ ಹೋರಾಟ, ಅವರ ಕಾತರ, ಆತಂಕವನ್ನು ಗಮನದಲ್ಲಿಟ್ಟುಕೊಂಡು ವಿಸ್ತೃತವಾದ ಸಭೆ ನಡೆಸಿ ಅಂತಿಮವಾಗಿ ನಿರ್ಣಯಕ್ಕೆ ಬಂದಿದ್ದೇವೆ. ಆ ನಿರ್ಣಯ ಆದಮೇಲೆಯೇ ಅದನ್ನು ನಾವು ಬಡ್ಜೆಟ್ ಮೂಲಕ ಪ್ರಕಟಿಸಿದ್ದೇವೆ. ಯಾವುದೇ ಕಾರಣಕ್ಕೆ ಬಾಗಲಕೋಟೆಯ ಜನರಿಗೆ ಅನಾನುಕೂಲವಾಗದ ರೀತಿಯಲ್ಲಿ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು: ಕೋರ್ಟಿನಲ್ಲಿ ಆರ್ಗ್ಯುಮೆಂಟ್ ನಡೆದ ಹಾಗೆ ನಡೆಯುತ್ತಿದೆ.

ಶ್ರೀ ಪಿ.ಹೆಚ್. ಪೂಜಾರ್: ನಾನು ಈ ವಿಷಯಕ್ಕಾಗಿ ಸಭಾತ್ಯಾಗ ಮಾಡುತ್ತಿದ್ದೇನೆ.